

ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಕಥೆಗಾರ್ತಿ ವಿಜಯಾ ಮೋಹನ್ (ಜ: ಜುಲೈ 1, 1968) ಮಧುಗಿರಿ ತಾಲ್ಲೂಕಿನ ಸುದ್ದೇಕುಂಟೆ ಗ್ರಾಮದವರು. ವೃತ್ತಿಯಿಂದ ಶಿಕ್ಷಕಿಯಾಗಿದ್ದರು. ಕಾಲಿನ ದೌರ್ಬಲ್ಯದಿಂದ ನಡೆಯುವುದು ಕಷ್ಟವಾಗಿದ್ದರೂ, ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. 'ತಬ್ಬಲಿ ಸಾರು', 'ಕಣ್ಣಿ', 'ಜಾತಿ', 'ಓಟು' ಹಾಗೂ 'ಮೇವು' ಅವರ ಕಥಾಸಂಕಲನಗಳು. 'ನೀರು' ಅವರ ಪ್ರಕಟಿತ ಮಿನಿ ಕಾದಂಬರಿ. 'ಜಾತಿ' ಸಂಕಲನಕ್ಕೆ 'ಬೆಸಗರಹಳ್ಳಿ ರಾಮಣ್ಣ ಪ್ರಶಸ್ತಿ' ಸಂದಿತ್ತು. ಅಜ್ಜ ಹೇಳುತ್ತಿದ್ದ ಕಥೆಗಳಿಂದ ಕಥಾಲೋಕದ ಬಗ್ಗೆ ಆಸಕ್ತಿ ತಳೆದ ಅವರು, ತಮ್ಮ ಬದುಕಿನ ಮಿತಿಗಳನ್ನು ಸಾಹಿತ್ಯದ ಮೂಲಕ ತುಂಬಿಕೊಳ್ಳಲು ಹವಣಿಸುವಂತೆ ಕಾಣಿಸುತ್ತಿದ್ದರು. ಬದುಕು ರೂಪಿಸಿದ ನೆಲದ ನುಡಿಯಲ್ಲಿ, ಅಲ್ಲಿನ ತವಕತಲ್ಲಣಗಳನ್ನೇ ಕಥೆಯಾಗಿಸುತ್ತಿದ್ದ ವಿಜಯಾ, ತಮ್ಮ ಕಥೆಗಳ ಮೂಲಕ ಗ್ರಾಮಜೀವನದ ಚೆಲುವು ಹಾಗೂ ಸಂಕಷ್ಟಗಳನ್ನು ಶೋಧಿಸಲು ನಡೆಸಿದ ಪ್ರಯತ್ನ ಅನನ್ಯವಾಗಿತ್ತು. ಭರವಸೆಗಳನ್ನೆಲ್ಲ ಕಳೆದುಕೊಂಡಂತೆ ಕಾಣಿಸುತ್ತಿದ್ದ ಅಸಹಾಯಕರು ಅವರ ಕಥನಗಳ ಕೇಂದ್ರದಲ್ಲಿರುತ್ತಿದ್ದರು. 2025ರ ಅಕ್ಟೋಬರ್ ತಿಂಗಳ 27ರಂದು ವಿಜಯಾ ಅವರು ಹೃದಯಾಘಾತದಿಂದ ಕೊನೆಯುಸಿರೆಳೆದರು.

ಜಾಸ್ತಿಯಾಗತಾ ಅವ್ವೆ. ನಾಳೆ ಡಿಎಚ್ಒರವರು, ಡಾಕ್ಟ್ರುಗಳು ಅವರ ಸಿಬ್ಬಂದಿ ಇವರ್ಗಳೆಲ್ಲ ಇದೇ ಊರಿಗೆ ಬೇಟಿಕೊಡುತಾ ಅವರಂತೆ. ಅದರೊಳಗಾಗಿ ಅಸ್ಪತ್ರೆಯವರು ಎಲ್ಲೆಲ್ಲಿ ನೀರ್ ನಿಂತಾವೆ ಯಾರ್ ಮನೆ ಮುಂದೆ ಕೊಚ್ಚೆ ಗುಂಡಿಗಳವ್ವೆ. ಮುಂದಕ್ಕೋಗದ ಮಂದವಾದ ಚರಂಡಿಗಳ ಕಡೆ ಹೆಚ್ಚು ನಿಗಾ ಮಾಡ್ಬೇಕು. ಯಾರ್ ಮನೇಲಿ ಜ್ವರ ಬಂದು ಚೆಕಪ್ಪಿಗೆ ಹೋಗುತ್ತಿಲ್ಲ ಎಂಬುವುದನ್ನ ಮನಗಂಡು. ಜನರಲ್ಲಿ ಅವೆರ್ನೆಸ್ಸು ಮೂಡಸ್ ಬೇಕಂತ ಮೂರ್ ಮೂರ್ ದಿನಕ್ಕು ಊರೂರಿನ ಆಶಾ ಕಾರ್ಯಕರ್ತೆಯರಿಗೆ ಮೀಟಿಂಗ್ ಕರದು ಕರದು ಗೈಡ್ ಲೈನ್ಸ್ ಕೊಡುತಾ ಅವರೆ. ಈ ಊರಿನ ಮನೆಮನೇಲಿ ಜ್ವರದ ಕೇಸುಗಳು ಜಾಸ್ತಿ ಹುಟ್ಕೊಂಡಿರೋದ್ರಿಂದ ಜಯಮ್ಮನೆ ಕುದ್ದಾಗಿ ಪೇಶೆಂಟುಗಳನ್ನ ಪತ್ತೆ ಮಾಡ್ ಬೇಕಾಗೈತೆ. ಯಾಕಂದ್ರೆ ಜ್ವರ ಬಂದ್ರೆ ಮೂರು ನಾಕು ದಿನವಾದ್ರು ಆಸ್ಪತ್ರೆಗೆ ಹೋಗ್ದಂಗೆ ರಕ್ತ ಪರೀಕ್ಷೆಯು ಮಾಡಸ್ದಂಗಿರುವ, ಜ್ವರ ಬಂದ್ರೆ ಏನ್ ಮಾಡತೈತೆ? ಮಾತ್ರೆ ನುಂಗಿರೋಗುತ್ತೈತೆ ಎಂಬ ತಾತ್ಸಾರಕ್ಕೆ ಮಾತಾಡುವ ಮನಸ್ಸಿನವರು ಹೆಚ್ಚಾಗಿರುವ ಇದೇ ಊರಲ್ಲಿ ಸಂದಿಗೊಬ್ಬರು ಇಬ್ಬರು ಜ್ವರ ಬಂದು ಪತ್ತೆಯಾಗತಾ ಅವರೆ. ಅಂಥವರನ್ನೆಲ್ಲ ಆದಷ್ಟು ಬೇಗನೆ ಆಶಾ ಕಾರ್ಯಕರ್ತೆಯೇ ನಿಗಾ ಮಾಡಬೇಕೆನ್ನುವ ಈ ಹೊತ್ತಿನಲ್ಲಿ, ದಿನಾ ಬೆಳಗಾದರೆ ಅವಳ ಮನಸ್ಸಿನಲ್ಲಿ ಆಶಾ ಭಾವನೆಯಿಂದ ಕೆಲಸ ಮಾಡ್ಬೇಕೆಂದು ಆಸೆ ಹೊತ್ತುಕೊಂಡು ಈಚೆ ಬರುತ್ತಿರುವ ಜಯಮ್ಮನಿಗೆ, ತಂಟೆ ತಾಪತ್ರಯಗಳು ಹೆಚ್ಚಾಗತ್ತಲೇ ಇರತ್ತಾವೆ. ಅದರಾಗೂ ಜಯಮ್ಮ ಅಂಥಾ ಗುಂಡಿಗೆಯಿರುವ ಹೆಣ್ಣುಮಗಳೇನಲ್ಲ. ಅದಿಕ್ಕೆ ಹೇಳಿದ್ದು ಸಂಜೆ ಹೊತ್ತು ತಲೆ ನೆಲಕ್ಕಾಕೀರೆ ನಿದ್ದೆಯೆಂಬೋದು ನಿಗವಾಗಿ ಅವಳ ಕಣ್ಣುಗಳಿಗೆ ಕಚ್ಚಿಕೊಂಬುತ್ತಿಲ್ಲವೆಂದು.

ಆಸ್ಪತ್ರೆಯವರು ಒತ್ತಡ ಕೊಡುತ್ತಾರೆ ಜನಾ ನೋಡೀರೆ ಹೇಳಿದ ಮಾತು ಕೇಳತ್ತಾ ಇಲ್ಲ, ಮನೇಲಿ ಕಟ್ಕೊಂಡ ಗಂಡನೆಂಬೋನು ಮಾಡೋ ವೃತ್ತಿಗೆ ಬಲ ಕೊಡುತಿಲ್ಲ. ಇಂಥ ಸಮೇವಿನೊಳಗೆ ಈ ವಾರದ ಕೆಳಗೆ ಉಪ್ಪಾರ ಕೇರಿಲಿ ಮಲ್ಲಣ್ಣನ ಮನೆಮುಂದೆ ನಡೆದ ಘಟನೆಯಿಂದ, ಅವಳ ಮನೆಯಲ್ಲಿನ ಗಂಡ ನರಸಿಂಹನೆಂಬೋನು, 'ಓಹೋ ನೀನು ತರೋ ನಲವತ್ತು ಸಾವರ ಸಂಬಳಕ್ಕೆ ಮಲ್ಲಣ್ಣನೆಂಡ್ರತ್ರ ಯಾಕ್ ಉಗುಸ್ ಕಂಡೆ? ಇರಲರ್ದವರು ಇರುವೆ ಬಿಟ್ಟಗಂಡ್ರು ಅಂಬಗಾಡ್ತ್ತಿಯಲ್ಲ ಕಂಡ್ರು ಕಾಣ್ ದಂಗೆ ಬರ್ತಾ ಇರು ಲೌಡಿಮುಂಡೆ' ಎಂದು ಎದ್ದರು ಕುಂತುರು ಕುಟುಗುತಾ ಅವನೆ. ಇಂಥ ಬೇಜವಾಬ್ದಾರಿ